ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ.

ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ:ಸಿ1(6) ದೈ.ಶಿ. ಕಾ.ಹಂ–11/09–10

ದಿನಾಂಕ:–24–06–2010

**ಸುತ್ತೋಲೆ**

ವಿಷಯ:–ದೈಹಿಕ ಶಿಕ್ಷಣ ಅಧಿಕಾರಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿ ಬಗ್ಗೆ ಕಾರ್ಯ ಸೂಚಿಯನ್ನು (ಜಾಬ್ ಚಾರ್ಟ್) ~~ರಚನೆ~~ ಪ್ರಕಟಿಸುವ ಬಗ್ಗೆ

ಉಲ್ಲೇಖ:–1. ಸರ್ಕಾರದ ಆದೇಶ ಸಂಖ್ಯೆ ಇಡಿ 98 ಯೋಯೋಕ 2007 ದಿನಾಂಕ: 30–08–07

2. ಸರ್ಕಾರದ ಆದೇಶ ಸಂಖ್ಯೆ ಇಡಿ 6 ಡಿಜಿಟಿ 2008 ದಿನಾಂಕ: 13–02–08
3. ಸರ್ಕಾರದ ತಿದ್ದುಪಡಿ ಆದೇಶ ಪತ್ರ ಸಂ ಇಡಿ 138 ಯೋಯೋಕ 2008 ದಿನಾಂಕ: 10–07–08
4. ನಿರ್ದೇಶಕರು, ಪ್ರೌಢ ಶಿಕ್ಷಣ ರವರ ಟಿಪ್ಪಣಿ ಪತ್ರ ದಿನಾಂಕ:–05–05–2009
5. ಸರ್ಕಾರದ ಪತ್ರ ಸಂಖ್ಯೆ ಇಡಿ 236 ಡಿಪಿಎಆರ್ 2009 ದಿನಾಂಕ:–11–11–2009

–&&&–

ಉಲ್ಲೇಖ–1,2 ಮತ್ತು 3 ರ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ/ಸೃಜಿಸಿ ಆದೇಶಿಸಲಾಗಿರುತ್ತದೆ. ಉಲ್ಲೇಖ–4 ರ ನಿರ್ದೇಶಕರು (ಪ್ರೌಢ ಶಿಕ್ಷಣ) ರವರ ಟಿಪ್ಪಣಿಯಲ್ಲಿ ದೈಹಿಕ ಶಿಕ್ಷಣ ಅಧಿಕಾರಿಗಳ ಕಾರ್ಯ ಹಂಚಿಕೆ (ಜಾಬ್ ಚಾರ್ಟ್) ಬಗ್ಗೆ ಪ್ರಸ್ತಾಪಿಸಿದ್ದು, ಅದರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ–5 ರ ಸರ್ಕಾರದ ಪತ್ರದಲ್ಲಿ ಈ ಪ್ರಸ್ತಾವನೆಗೆ ಸರ್ಕಾರದ ಅನುಮತಿ ನೀಡಿದ್ದು, ಸೂಕ್ತ ಆದೇಶವನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಹೊರಡಿಸುವಂತೆ ತಿಳಿಸಿರುತ್ತಾರೆ.

ಹೊಸದಾಗಿ ಸೃಜಿಸಲಾದ/ಮೇಲ್ದರ್ಜೆಗೇರಿಸಲಾದ ಈ ಕೆಳಕಂಡ ವೃಂದಗಳ ಅಧಿಕಾರಿ/ ನೌಕರರಿಗೆ ಕರ್ತವ್ಯ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿದೆ. ಅದರಂತೆ ರಚಿಸಲಾದ ಕರ್ತವ್ಯಗಳು/ ಜವಾಬ್ದಾರಿಗಳ ಕಾರ್ಯಸೂಚಿಯನ್ನು ಇದರೊಂದಿಗೆ ಅನುಬಂಧಿಸಿ ಇಲಾಖೆಯ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

01. ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
02. ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
03. ಹಿರಿಯ ಸಹಾಯಕ ನಿರ್ದೇಶಕರು (ದೈಹಿಕ ಶಿಕ್ಷಣ), [ಆಯುಕ್ತರ ಕಛೇರಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಡಿ.ಎಸ್.ಇ.ಅರ್.ಟಿ]
04. ವಿಭಾಗೀಯ ಉಪನಿರ್ದೇಶಕರು (ದೈಹಿಕ ಶಿಕ್ಷಣ)
05. ಜಂಟಿ ನಿರ್ದೇಶಕರು (ದೈಹಿಕ ಶಿಕ್ಷಣ)

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಕೆ. ಕೃಷ್ಣೇಗೌಡ)
ಜಂಟಿ ನಿರ್ದೇಶಕರು(ಆಡಳಿತ)
ಆಯುಕ್ತರ ಪರವಾಗಿ

24/6/10

ಇವರಿಗೆ,

01. ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
02. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ / ಗುಲ್ಬರ್ಗ
03. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು/ ಸಹ ನಿರ್ದೇಶಕರು / ಸಿ.ಟಿ.ಇ ಪ್ರಾಂಶುಪಾಲರು
04. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು(ಆಡಳಿತ)/ ಡಯಟ್ ಪ್ರಾಂಶುಪಾಲರು
05. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು

kpeta.weebly.com

Scanned by CamScanner

kpeta.weebly.com

# ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿಗಳು

1. ನಾಡಗೀತೆ, ರಾಷ್ಟ್ರಗೀತೆಯನ್ನು ದೈಹಿಕ ಶಿಕ್ಷಣ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಶಾಲಾ ಮುಖ್ಯ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಬೆಳಗ್ಗಿನ ಪ್ರಾರ್ಥನಾ ಸಮಯದಲ್ಲಿ ಹಾಗೂ ಸಂಜೆ ಶಾಲೆ ಬಿಡುವಾಗ ಮಕ್ಕಳಿಂದ ರಾಗವಾಗಿ ಹಾಡಿಸುವುದನ್ನು ಪರಿಶೀಲಿಸಿ ಉತ್ತಮ ಪಡಿಸಲು ಮಾರ್ಗದರ್ಶನ ನೀಡುವುದು ಹಾಗೂ ದೈಹಿಕ ಶಿಕ್ಷಣ ಬೋಧನೆಯ ಬಗ್ಗೆ ಶೈಕ್ಷಣಿಕ ಪ್ರಗತಿಯ ಬಗ್ಗೆ ತಾತ್ವಿಕ ಪ್ರಾಯೋಗಿಕ ವಿಷಯದ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಮಾರ್ಗದರ್ಶನ ನೀಡುವುದು.
2. ಶಾಲೆಯ ಆಟದ ಮೈದಾನದಲ್ಲಿ ಮಕ್ಕಳು ಆಟವಾಡುತ್ತಿದ್ದಾರೆಯೇ, ಆಟದ ಮೈದಾನ ಸ್ವಚ್ಛವಾಗಿದೆಯೇ ಎಂಬುದನ್ನು ಪರಿಶೀಲಿಸಿ ಅವುಗಳ ನಿರ್ವಹಣೆ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವುದು.
3. ಶಾಲಾ ಮಕ್ಕಳಿಂದ ಕ್ರೀಡೆ ಮತ್ತು ಶಾರೀರಿಕ ಕಸರತ್ತುಗಳನ್ನು ಮಾಡಿಸಿ ಹಾಗೆ ತರಬೇತಿ ನೀಡಲಾಗುತ್ತಿದೆಯೆ ಎಂದು ಪರಿಶೀಲಿಸುವುದು ಹಾಗೂ ಉತ್ತಮ ಪಡಿಸಲು ಸಲಹೆ ಸೂಚನೆ ನೀಡುವುದು.
4. ಶಾಲೆಯಲ್ಲಿ ಇರುವ ಕ್ರೀಡಾ ಸಾಮಗ್ರಿ ಬಳಕೆ ಮಾಡಲಾಗುತ್ತಿದೆಯೇ, ಶಾಲೆಯಲ್ಲಿ ಇರುವ ಬ್ಯಾಂಡ್ ಸೆಟ್ ಬಳಕೆಯಾಗುತ್ತಿದೆಯೇ ಈ ವ್ಯಾಯಾಮ ಮಾಡಿಸಿ ಮಕ್ಕಳು ತಾಳಬದ್ಧವಾಗಿ ಮಾಡುವ ಬಗ್ಗೆ ತರಬೇತಿ ನೀಡಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡುವುದು ಹಾಗೂ ಉತ್ತಮಗೊಳಿಸುವ ಬಗ್ಗೆ ಮಾರ್ಗದರ್ಶನ ನೀಡುವುದು.
5. ಇಲಾಖೆಯ ಮಾರ್ಗಸೂಚಿಯಂತೆ ಬೆಳಿಗ್ಗೆ ಮತ್ತು ಸಂಜೆ ಆಸಕ್ತ ಕ್ರೀಡಾ ಪಟುಗಳಿಗೆ ತರಬೇತಿ ನೀಡಿ ತಂಡಗಳನ್ನು ಸಿದ್ಧಪಡಿಸಿರುವ ಬಗ್ಗೆ ಪರಿಶೀಲನೆ ಮಾಡುವುದು.
6. ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಮಾಡಿಸಿರುವ ಬಗ್ಗೆ ಪರಿಶೀಲಿಸಿ ನ್ಯೂನ್ಯತೆ ಇರುವ ಮಕ್ಕಳಿಗೆ ದೈಹಿಕ ವ್ಯಾಯಾಮ ಹಾಗೂ ಯೋಗ ತರಬೇತಿ ನೀಡಿ ಗುಣಮುಕರಾಗುಂತೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿ ಪರಿಶೀಲಿಸಿ ವರದಿಯಲ್ಲಿ ನಮೂದಿಸುವುದು, ಉತ್ತಮ ಪಡಿಸಲು ಮಾರ್ಗದರ್ಶನ ಮಾಡುವುದು.
7. ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಭೇಟಿ/ತಪಾಸಣೆ ವೇಳೆಯಲ್ಲಿ ದೈಹಿಕ ಶಿಕ್ಷಣ, ಯೋಗ ಶಿಕ್ಷಣ, ಆರೋಗ್ಯ ಶಿಕ್ಷಣ ಪಠ್ಯಕ್ರಮದ ಬೋಧನೆ, ಪರೀಕ್ಷೆ, ಕ್ರೀಡಾ ತರಬೇತಿ, ಕ್ರೀಡಾಂಗಣ ಅಭಿವೃದ್ಧಿ ಹಾಗು ಪರೀಕ್ಷಾ ಮೌಲ್ಯ ಮಾಪನ ಇದರ ಪರಿಶೀಲನೆ ನಡೆಸುವುದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು (ಆಡಳಿತ) ರವರಿಗೆ ವರದಿ ನೀಡುವುದು
8. ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಕ್ರೀಡಾನಿಧಿಯ ವಸೂಲಾತಿಯ ಕ್ರೋಡೀಕೃತ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಆಯುಕ್ತರ ಕಛೇರಿ ದೈಹಿಕ ಶಿಕ್ಷಣ ಉಪನಿರ್ದೇಶಕರಿಗೆ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ನೀಡುವುದು.
9. ಹಿರಿಯ ಪ್ರಾಥಮಿಕ ಶಾಲೆಗಳ, ಹೋಬಳಿ ಮತ್ತು ತಾಲ್ಲೂಕು ಮಟ್ಟದ ಕ್ರೀಡಾಕೂಟಗಳನ್ನು ಸಂಘಟಿಸುವುದು.
10. ಪ್ರೌಢ ಶಾಲೆಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟವನ್ನು ಸಂಘಟಿಸುವುದು.
11. ಕ್ರೀಡಾ ನಿಧಿ ಶುಲ್ಕವನ್ನು ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಂದ ವಸೂಲಿ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಉಪನಿರ್ದೇಶಕರ ಕಛೇರಿಗೆ ಕಳುಹಿಸುವುದು. ಪ್ರತಿ ವರ್ಷ ಇದರ ಬ್ಯಾಲೆನ್ಸ್ ಷೀಟ್ ತಯಾರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು (ಆಡಳಿತ) ರವರಿಗೆ ನೀಡುವುದು.
12. ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳಿಗೆ ತಂಡಗಳನ್ನು ಕಳುಹಿಸಿಕೊಡುವುದು ಹಾಗು ತಾಲ್ಲೂಕು ತಂಡಗಳ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುವುದು.
13. ನಿಯಮಾನುಸಾರ ಶಾಲೆಗಳಲ್ಲಿ ಅನುಪಯುಕ್ತ ಕ್ರೀಡಾ ಸಾಮಗ್ರಿಗಳನ್ನು ಇಲಾಖಾ ನಿಯಮದಂತೆ ಕ್ರೀಡಾ ದಾಸ್ತಾನು ಪುಸ್ತಕದಿಂದ ಹರಾಜು ಮಾಡುವುದರ ಬಗ್ಗೆ ರೂ 5000/- ಮೀರದಂತೆ ವಿಲೇವಾರಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
14. ನಾಡ ಹಬ್ಬ ಮತ್ತು ರಾಷ್ಟ್ರೀಯ ಹಬ್ಬಗಳಲ್ಲಿ ದೈಹಿಕ ಶಿಕ್ಷಣ ಚಟುವಟಿಕೆಗಳ ಪ್ರದರ್ಶನ ಮತ್ತು ಸಂಘಟನೆಯ ಜವಾಬ್ದಾರಿ ನಡೆಸುವುದು.
15. ತಾಲ್ಲೂಕು ಮಟ್ಟದ ಕ್ರೀಡಾಸಮಿತಿ ರಚನೆ ಮತ್ತು ಸಮಿತಿ ಸಭೆಯಲ್ಲಿ ವಾರ್ಷಿಕ ಕ್ರೀಡಾಕೂಟಗಳಿಗೆ ಅನುಮೋದನೆ ಪಡೆಯುವುದು.

Scanned by CamScanner

16. ವಿದ್ಯಾರ್ಥಿ ಕ್ರೀಡಾ ನಿಧಿ ಸಂಗ್ರಹವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ದೈಹಿಕ ಶಿಕ್ಷಣ ಪರಿವೀಕ್ಷಕರ ಹೆಸರಿನಲ್ಲಿ ಅಂಗೀಕೃತ ಶಡ್ಯೂಲ್ ಬ್ಯಾಂಕಿನಲ್ಲಿ ಜಂಟಿ ಖಾತೆ ಯಲ್ಲಿಡುವುದು.
17. ಶಾಲೆಯ ಆಯಾ ಸಾಲಿನ ಕ್ರೀಡಾ ಆಯವ್ಯಯವನ್ನು ಮತ್ತು ಎಸ್.ಡಿ.ಎಂ.ಸಿ. ಅನುಮೋದಿತ ಪಟ್ಟಿಯನ್ನು ಪರಿಶೀಲಿಸಿ ಅನುಮತಿ ನೀಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು
18. ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ನಡೆಸ್ತಿರುವ ಬಗ್ಗೆ ಶಾಲೆಗಳಿಂದ ಮಾಹಿತಿ ಪಡೆಯುವುದು ಹಾಗೂ ತಪಾಸಣೆ ನಡೆಸಲು ಸೂಕ್ತ ಕ್ರಮ ವಹಿಸುವುದು
19. ತಾಲ್ಲೂಕಿನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರ ಸೇವಾ ವಿವರ ಮಾಹಿತಿಯನ್ನು ಒಂದು ವಹಿಯಲ್ಲಿ ನಿರ್ವಹಿಸುವುದು
20. ತಾಲ್ಲೂಕು ಮಟ್ಟದ ಎಲ್ಲಾ ಕ್ರೀಡಾಕೂಟಗಳು ಸಂಘಟನಾ ನಂತರ ಎಲ್ಲಾ ಓಚರ್ ಗಳನ್ನು ಕ್ರೋಡೀಕರಿಸಿ ಸಕಾಲದಲ್ಲಿ ಉಪಯೋಗತ ಪ್ರಮಾಣ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುವ ವ್ಯವಸ್ಥೆ ಮಾಡುವುದು.
21. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೈಹಿಕ ಶಿಕ್ಷಣ ಶಿಕ್ಷಕರುಗಳ ಮಾಹಿತಿ ಸಂಗ್ರಹಿಸಿ (ಪದವೀಧರ, ಪದವೀಧರರಲ್ಲದ) ಅವರುಗಳಿಗೆ ಹೆಚ್ಚಿನ ವಿದಾಯಾಭ್ಯಾಸಕ್ಕೆ ಶಿಫಾರಸ್ಸು ಮಾಡುವುದು, ತರಬೇತಿಗೆ ನಿಯೋಜಿಸುವುದು ಮುಂತಾದ ಕಾರ್ಯಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಹಕರಿಸುವುದು.
22. ಯಾವುದೇ ರೀತಿಯ ತಾಂತ್ರಿಕ ನೆರವು ಅಗತ್ಯವಾದಲ್ಲಿ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳನ್ನು ನೇರವಾಗಿ ಸಂಪರ್ಕಿಸುವುದು.
23. ತಾಲ್ಲೂಕಿನಲ್ಲಿ ನಡೆಯುವ ಎಲ್ಲಾ ಕ್ರೀಡೆಗಳಿಗೆ ಸಂಬಂಧಿಸಿದಂತೆ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಸೇವಾದಳ ಘಟಕಗಳಿಗೆ ಸಂನಂಧಿಸಿದಂತೆ ಉಂಟಾಗಬಹುದಾದ ಸಮಸ್ಯೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
24. ಶಾಲೆಗಳಲ್ಲಿ ಶಿಕ್ಷಕರಿಗೆ ರಾಷ್ಟ್ರ ಧ್ವಜ ಹಾಗೂ ರಾಷ್ಟ್ರ ಗೀತೆ ಸಂಬಂಧ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಭಾರತ ಸೇವಾದಳ ಸಂಸ್ಥೆಯ ಮೂಲಕ ತರಬೇತಿ ಏರ್ಪಡಿಸುವುದು.
25. ಜಿಲ್ಲೆಯಲ್ಲಿ ಉಪನಿರ್ದೇಶಕರು ಅಥವಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಂದ ಸಂಘಟಿಸಲಾಗುವ ಕ್ರೀಡಾ ಕೂಟಗಳು/ ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡು ಸಕ್ರಿಯವಾಗಿ ಸಹಕರಿಸುವುದು.
26. ತಾಲ್ಲೂಕು ಕ್ರೀಡಾ ಸಮಿತಿಯಲ್ಲಿ ಕಾರ್ಯದರ್ಶಿಯಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ನಡೆಸುವುದು.
27. ತಿಂಗಳಲ್ಲಿ ಕನಿಷ್ಟ 10 ಶಾಲೆಗಳ ಭೇಟಿ ಹಾಗೂ 2 ಶಾಲೆಗಳ ತಪಾಸಣೆ ನಡೆಸುವುದು ಅದರ ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿ, ಶಾಲೆಗಳಿಂದ ಅನುಪಾಲನಾ ವರದಿ ಪಡೆಯುವುದು.
28. ತಾಲ್ಲೂಕಿನ ಮಟ್ಟದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಭಿವೃದ್ಧಿ ಪಡಿಸಲು ಕ್ರಿಯಾ ಯೋಜನೆ ರೂಪಿಸಿ ಮೇಲಾಧಿಕಾರಿಗಳಿಗೆ ಕಳುಹಿಸುವುದು ಹಾಗೂ ಮಾಸಿಕ ಪ್ರವಾಸ ಮತ್ತು ದಿನಚರಿಯನ್ನು ನಿಗಧಿತ ಅವಧಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ಪಡೆಯುವುದು.
29. ಕ್ರೀಡಾ ಅಭಿವೃದ್ಧಿಗೆ ತಾಲ್ಲೂಕು ಮಟ್ಟದಲ್ಲಿ ಬಿಡುಗಡೆ ಆಗುವ ಅನುದಾನ ನಿಗದಿತ ಅವಧಿಯೊಳಗೆ ಸಮರ್ಪಕವಾಗಿ ಬಳಕೆ ಮಾಡುವುದು.
30. ಕ್ರೀಡಾಕೂಟಗಳ ಸಂಘಟನೆ ಹಾಗು ಹೆಚ್ಚುವರಿ ಕಾರ್ಯ ನಿಮಿತ್ತವಾಗಿ ದೈಹಿಕ ಶಿಕ್ಷಣ ಶಿಕ್ಷಕರು ಹಾಗು ಸಹ ಶಿಕ್ಷಕರನ್ನು ನಿಯೋಜನೆ ಮಾಡಿಕೊಳ್ಳುವ ಸಂದರ್ಭದಲ್ಲಿ ಮುಂಚಿತವಾಗಿ ಸೂಕ್ತ ಶಿಫಾರಸ್ಸಿನೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ ಆದೇಶ ಪಡೆಯುವುದು.
31. ಜಿಲ್ಲಾ, ವಿಭಾಗೀಯ ಹಾಗು ರಾಜ್ಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕಾರ ನೀಡುವುದು. ಹಾಗೂ ತಾಲ್ಲೂಕಿನಲ್ಲಿ ಸಂಘಟಿಸಿದ ಎಲ್ಲಾ ತರಹದ ಕ್ರೀಡಾ ಕೂಟಗಳ ಬಗೆಗೆ ಮಾಹಿತಿಯನ್ನು ಕ್ರೋಢೀಕರಿಸುವುದು.
32. ದೈಹಿಕ ಶಿಕ್ಷಣ ಶಿಕ್ಷಕರ ಆಯ್ಕೆ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸುವುದು (ಪ್ರಶಸ್ತಿ ಇನ್ನಿತರೆ)

kpeta.weebly.com

Scanned by CamScanner

33. ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಯನ್ನು ದೈಹಿಕ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಸೃಷ್ಟಿಸಿರುವುದರಿಂದ ಈ ಮೇಲ್ಕಂಡ ಅಂಶಗಳನ್ನು ಪಾಲಿಸುವುದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಕ್ರೀಡಾ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು.

ಜಿಲ್ಲೆಯಲ್ಲಿ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾಲಕಾಲಕ್ಕೆ ನೀಡುವ ಸೂಚನೆಗಳನ್ವಯ ಕಾರ್ಯನಿರ್ವಹಿಸುವುದು.

kpeta.weebly.com

Scanned by CamScanner

## ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ~~ಕಾರ್ಯಭಾರ~~ ಕರ್ತವ್ಯ ಹಾಗು ಜವಾಬ್ದಾರಿ

1. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ದೈಹಿಕ ಶಿಕ್ಷಣ ತರಬೇತಿ ಕಾಲೇಜು, ಪ್ರಾಥಮಿಕ ಮತ್ತು ಪ್ರೌಢ ಶಾಲೆ ತಪಾಸಣೆ ನಡೆಸುವುದು.
2. ಜಿಲ್ಲೆಯಲ್ಲಿ ದೈಹಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಕ್ರೀಡೆ, ಯೋಗ ಗಳ ಅಭಿವೃದ್ಧಿ ಮತ್ತು ಕ್ರಿಯಾಶೀಲವಾಗಿಸಲು ಕ್ರಮ ವಹಿಸುವುದು.
3. ಪ್ರಾಥಮಿಕ ಮತ್ತು ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ನಿಯೋಜನೆ ಬಗ್ಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸುಮಾಡುವುದು.
4. ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು.
5. ಜಿಲ್ಲೆಯ ವಿದ್ಯಾರ್ಥಿ ಕ್ರೀಡಾ ನಿಧಿ ಸಂಗ್ರಹಣೆ ಮತ್ತು ಆಯವ್ಯಯ ತಯಾರಿಸಿ ಅನುಮೋದನೆಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ವಿಭಾಗೀಯ ಉಪನಿರ್ದೇಶಕರು(ದೈಶಿ) ಇವರಿಗೆ ಕಳುಹಿಸುವುದು.
6. ಆಯವ್ಯಯ ಅನುಮೋದನೆಯಂತೆ ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ ವೆಚ್ಚಮಾಡಿ ನಿಗಧಿತ ಖರ್ಚು ವೆಚ್ಚಗಳ ಲೆಕ್ಕವನ್ನು ನಿಯಮಾನುಸಾರ ನಿರ್ವಹಿಸುವುದು.
7. ತಾಲ್ಲೂಕು ಹಂತದ ಕ್ರೀಡಾಕೂಟಗಳ ಮೇಲುಸ್ತುವಾರಿ
8. ಜಿಲ್ಲಾ, ವಿಭಾಗ, ರಾಜ್ಯ ಮತ್ತು ರಾಷ್ಟ್ರ ಮಟ್ಟ ಕ್ರೀಡಾಕೂಟಗಳ ಸಂಘಟನೆ ಹಾಗೂ ನಿರ್ವಹಣೆ ಮಾಡುವುದು
9. ರಾಷ್ಟ್ರೀಯ ಹಬ್ಬಗಳ ಆಚರಣೆ ಮೇಲುಸ್ತುವಾರಿ
10. ಜಿಲ್ಲೆಯಲ್ಲಿನ ಕ್ರೀಡಾಪಟುಗಳಿಗೆ ಮತ್ತು ದೈಹಿಕ ಶಿಕ್ಷಕರಿಗೆ ಕ್ರೀಡಾ ತರಬೇತಿ ನಡೆಸುವುದು.
11. ವಿದ್ಯಾರ್ಥಿ ಕ್ರೀಡಾನಿಧಿ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ತಪಾಸಣೆ ನಡೆಸಿ ಅದರ ವರದಿಯನ್ನು ಉಪನಿರ್ದೇಶಕರು (ಆಡಳಿತ) ರವರ ಮೂಲಕ ವಿಭಾಗೀಯ ಉಪನಿರ್ದೇಶಕರು(ದೈಶಿ) ಇವರಿಗೆ ಪರಿಶೀಲನೆಗೆ ಕಳುಹಿಸುವುದು.
12. ಹೊಸದಾಗಿ ಪ್ರಾರಂಭವಾಗುವ ದೈಹಿಕ ಶಿಕ್ಷಣ ಕಾಲೇಜು ಮಂಜೂರಾತಿಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಪ್ರಸ್ತಾವನೆ ಸಲ್ಲಿಸುವುದು.
13. ಆಟದ ಮೈದಾನ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ತಯಾರಿಸಿ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಮೇಲಿನ ಅಧಿಕಾರಿಗಳಿಗೆ ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡುವುದು.
14. ಭಾರತ ಸೇವಾದಲ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಚಟುವಟಿಕೆಯಲ್ಲಿ ಇಲಾಖಾ ಪ್ರತಿನಿಧಿಯಾಗಿ ಭಾಗವಹಿಸುವುದು.
15. ವಿದ್ಯಾರ್ಥಿ ಕ್ರೀಡಾ ನಿಧಿ, ನೊಂದಣಿ ಶುಲ್ಕ, ಕ್ರೀಡಾ ಶುಲ್ಕ, ಇದರ ವಸೂಲಿ ಮತ್ತು ವೆಚ್ಚದ ಬಗ್ಗೆ ಲೆಕ್ಕ ಪತ್ರ ವನ್ನು ಕಛೇರಿಯಲ್ಲಿ ನಿರ್ವಹಿಸುವುದು ಹಾಗೂ ಈ ವಿವರಗಳನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ಕಾಲಕಾಲಕ್ಕೆ ಗಮನಕ್ಕೆ ತರುವುದು.
16. ದೈಹಿಕ ಶಿಕ್ಷಣ, ಕ್ರೀಡೆ ಮತ್ತು ಯೋಗ ಶಿಕ್ಷಣದ ಬಗ್ಗೆ ಆಡಳಿತಾತ್ಮಕ ಮತ್ತು ಆರ್ಥಿಕ ವ್ಯವಹಾರಗಳ ಪತ್ರ ಹಾಗು ಕಡತ ನಿರ್ವಹಣೆಯನ್ನು ಉಪನಿರ್ದೇಶಕರು (ಆ) ಇವರೊಂದಿಗೆ ನೇರವಾಗಿ ನಡೆಸುವುದು.
17. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ದೈಹಿಕ ಶಿಕ್ಷಣ ಶಿಕ್ಷಕರ ಜೇಷ್ಠತಾ ಪಟ್ಟಿ ತಯಾರಿಸಲು ನೆರವು ನೀಡುವುದು.
18. ಜಿಲ್ಲೆಯಲ್ಲಿ ಉತ್ತಮ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಅವರುಗಳಿಗೆ ವಿಶೇಷ ತರಬೇತಿ ನೀಡಲು ವ್ಯವಸ್ಥೆ ಮಾಡುವುದು.
19. ವಾರ್ಷಿಕ ಕನಿಷ್ಠ 80 ಶಾಲೆಗಳ ತಪಾಸಣೆ, 125 ದಿನಗಳ ಪ್ರವಾಸ ಭೇಟಿ ಮಾಡುವುದು.
20. ಉಪಯೋಗಕ್ಕೆ ಬಾರದ ಅನುಪಯುಕ್ತ ಕ್ರೀಡಾ ಸಲಕರಣೆಗಳನ್ನು ರೂ 10,000/- ರ ವರೆಗೆ ವಿಲೇವಾರಿ ಮಾಡಲು ಉಪನಿರ್ದೇಶಕರು (ಆಡಳಿತ) ರವರಿಗೆ ಶಿಫಾರಸ್ಸು ಮಾಡುವುದು.
21. ಉಪನಿರ್ದೇಶಕರ ಸೂಚನೆಯಂತೆ ಇತರೆ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವುದು.
22. ಜಿಲ್ಲಾ ವತಿಯಿಂದ ಸಂಘಟಿಸಿದ ಕ್ರೀಡಾ ಕೂಟಗಳ ಖರ್ಚಿನ ಲೆಕ್ಕ ಪತ್ರಗಳನ್ನು ಕಛೇರಿಯಲ್ಲಿ ನಿರ್ವಹಿಸುವುದು.
23. ದೈಹಿಕ ಶಿಕ್ಷಣ ಶಿಕ್ಷಕರ ಆಯ್ಕೆ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುವುದು. (ಪ್ರಶಸ್ತಿ ಇನ್ನಿತರೆ)
24. ಇತರೆ ಸಂಘ ಸಂಸ್ಥೆಗಳೊಂದಿಗೆ ಸಹಕಾರ ನೀಡುವುದು.

Scanned by CamScanner

## ವಿಭಾಗೀಯ ಉಪನಿರ್ದೇಶಕರು(ದೈಹಿಕ ಶಿಕ್ಷಣ) ಇವರ ಕಾರ್ಯಭಾರ

ವಿಭಾಗೀಯ ಸಹ ನಿರ್ದೇಶಕರಿಗೆ ದೈಹಿಕ ಶಿಕ್ಷಣದ ಬಗ್ಗೆ ಸಹಕರಿಸುವುದು ಮತ್ತು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು.

1. ವಿಭಾಗೀಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ, ಕ್ರೀಡೆ, ಯೋಗ ಮತ್ತು ಆರೋಗ್ಯ ಶಿಕ್ಷಣ ಅಭಿವೃದ್ಧಿ ಪಡಿಸಲು ಕ್ರಮ ವಹಿಸುವುದು.
2. ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಜಿಲ್ಲಾ ಕ್ರೀಡಾಧಿಕಾರಿಯವರು ದೈಹಿಕ ಶಿಕ್ಷಣದ ಬಗ್ಗೆ ನೀಡಿದ ಪ್ರಾಥಮಿಕ, ಪ್ರೌಢ ಶಾಲೆಗಳ ತಪಾಸಣಾ ವರದಿಯನ್ನು ಪರಿಶೀಲಿಸಿ ಕ್ರಮ ಜರುಗಿಸಲು ಶಿಫಾರಸ್ಸು ಮಾಡುವುದು.
3. ವಿದ್ಯಾರ್ಥಿ ಕ್ರೀಡಾ ನಿಧಿ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಉಪನಿರ್ದೇಶಕರ ಕಛೇರಿ ತಪಾಸಣೆ ನಡೆಸುವುದು. ಈ ಬಗ್ಗೆ ವರದಿಯನ್ನು ಸಹ ನಿರ್ದೇಶಕರು(ದೈಹಿಕ ಶಿಕ್ಷಣ) ಇವರಿಗೆ ನೀಡುವುದು.
4. ವಿಭಾಗ ಮಟ್ಟದ ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿ ಆಯವ್ಯಯ ಅನುಮೋದನೆ ಮಾಡುವುದು. ವಿಭಾಗದ ಎಲ್ಲಾ ಜಿಲ್ಲೆಗಳ ವಿದ್ಯಾರ್ಥಿ ಕ್ರೀಡಾ ನಿಧಿ ವಸೂಲಿ, ವೆಚ್ಚದ ಬಗ್ಗೆ ವಿವರವನ್ನು ಸಹ ನಿರ್ದೇಶಕರು (ದೈಹಿಕ ಶಿಕ್ಷಣ) ಇವರಿಗೆ ವಿಭಾಗದ ಸಹ ನಿರ್ದೇಶಕರ ಮೂಲಕ ಸಲ್ಲಿಸುವುದು.
5. ವಿಭಾಗೀಯ ವ್ಯಾಪ್ತಿಯಲ್ಲಿ ಬರುವ ಶಾಲಾ ಕ್ರೀಡಾಕೂಟಗಳ ಮೇಲುಸ್ತುವಾರಿ ನೋಡಿಕೊಳ್ಳುವುದು ಹಾಗೂ ಸೂಕ್ತ ಮಾಹಿತಿ ಸಂಗ್ರಹಿಸಿ ದಾಖಲಿಸುವುದು.
6. ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಏರ್ಪಡಿಸಿ ಕ್ರೀಡೆಗೆ ಉತ್ತೇಜನ ನೀಡುವುದು
7. ದೈಹಿಕ ಶಿಕ್ಷಣ ಶಿಕ್ಷಕರಿಗೆ ಕ್ರೀಡೆಗಳ ಬಗ್ಗೆ ತರಬೇತಿ ನೀಡುವುದು. ವಿಶೇಷ ಶಿಬಿರಗಳನ್ನು ನಡೆಸುವುದು.
8. ವಿಭಾಗೀಯ ವ್ಯಾಪ್ತಿಯಲ್ಲಿ ಬರುವ ದೈಹಿಕ ಶಿಕ್ಷಣ ಕಾಲೇಜು ಮತ್ತು ಕ್ರೀಡಾ ಶಾಲೆಗಳಿಗೆ ಭೇಟಿ ತಪಾಸಣೆ ನಡೆಸುವುದು
9. ಸ್ವಯಂ ಸೇವಾ ಸಂಸ್ಥೆಗಳ ಜೊತೆ ಸಹಕರಿಸಿ ಕ್ರೀಡಾಭಿವೃದ್ಧಿ ಬಗ್ಗೆ ಕ್ರಮ ವಹಿಸುವುದು.
10. ಅನುಪಯುಕ್ತ ಕ್ರೀಡಾ ಉಪಕರಣಗಳನ್ನು ರೂ 25,000/– ಕ್ಕೆ ಮೀರದಂತೆ ವಿಲೇವಾರಿ ಮಾಡಲು ವಿಭಾಗೀಯ ಸಹ ನಿರ್ದೇಶಕರ ಮೂಲಕ ಶಿಫಾರಸ್ಸು ಮಾಡುವುದು.
11. ಕ್ರೀಡಾ ಕೂಟಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರ ನಿಯೋಜನೆ ಮಾಡಲು ವಿಭಾಗದ ಸಹ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯುವುದು.
12. ಶಾಲಾ ಕ್ರೀಡಾಕೂಟದಲ್ಲಿ ಮೇಲುಸ್ತುವಾರಿ ನೋಡಿಕೊಳ್ಳುವುದು.(ಎಸ್.ಜಿ.ಎಫ್.ಐ. ನಿಯಮದಂತೆ)
13. ದೈಹಿಕ ಶಿಕ್ಷಣ ಶಿಕ್ಷಕರ ಅಗತ್ಯ ಇರುವ ಕಡೆಗೆ ನಿಯೋಜನೆ ಮಾಡಲು ಶಿಫಾರಸ್ಸು ಮಾಡುವುದು.
14. ಆಟದ ಮೈದಾನ ಅಭಿವೃದ್ಧಿಪಡಿಸುವುದು ಹಾಗು ಕ್ರೀಡಾಂಗಣದ ಗುಣಮಟ್ಟ ಕಾಯ್ದುಕೊಳ್ಳುವುದು.
15. ವಾರ್ಷಿಕವಾಗಿ ವಿಭಾಗಮಟ್ಟದಲ್ಲಿ ಬರುವ ಪ್ರಾಥಮಿಕ, ಪ್ರೌಡ, ಸಂಯುಕ್ತ ಶಾಲೆಗಳ ತಪಾಸಣೆ ನಡೆಸುವುದು.
16. ವರ್ಷದಲ್ಲಿ ಕನಿಷ್ಠ 100 ದಿನಗಳು ಶಾಲೆಗೆ ಭೇಟಿ, 75 ಶಾಲೆಗಳ ತಪಾಸಣೆ ಕಾರ್ಯನಿರ್ವಹಿಸುವುದು.
17. ಸಹ ನಿರ್ದೇಶಕರು ಸೂಚಿಸುವ ಆಡಳಿತಾತ್ಮಕ ಮತ್ತು ಇತರೆ ಕೆಲಸಗಳನ್ನು ನಿರ್ವಹಿಸುವುದು.
18. ತಮ್ಮ ವ್ಯಾಪ್ತಿಯ ಕಾರ್ಯಗಳಿಗೆ ಸಂಬಂಧಿಸಿದ (ದೈಹಿಕ ಶಿಕ್ಷಣ) ಕಡತ ಮತ್ತು ಪತ್ರಗಳನ್ನು ನೇರವಾಗಿ ಸಹ ನಿರ್ದೇಶಕರುಗಳಿಗೆ ವ್ಯವಹರಿಸುವುದು
19. ಸಹ ನಿರ್ದೇಶಕರು (ದೈಹಿಕ ಶಿಕ್ಷಣ) ಇವರು ವಹಿಸುವ ಇತರೆ ಆಡಳಿತಾತ್ಮಕ ಕರ್ತವ್ಯಗಳು
20. ಕ್ರೀಡಾ ಸಂಚಿತ ನಿಧಿ ಬಳಕೆಗೆ ಶಾಲಾ ಮುಖ್ಯ ಶಿಕ್ಷಕರಿಗೆ ಅನುಮತಿ ನೀಡುವಲ್ಲಿ ಸಹ ನಿರ್ದೇಶಕರಿಗೆ ಸೂಕ್ತ ಶಿಫಾರಸ್ಸು ಮಾಡುವುದು.

Scanned by CamScanner

<u>ಸಹ ನಿರ್ದೇಶಕರು(ದೈಹಿಕ ಶಿಕ್ಷಣ) ಇವರ ಕಾರ್ಯಭಾರ</u>

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬರುವ ಮತ್ತು ಉನ್ನತ ವ್ಯಾಸಂಗಕ್ಕಾಗಿ ನಿಯೋಜನೆ ಮಾಡುವ ಡಿ.ಪಿ.ಇಡಿ. ಕಾಲೇಜುಗಳ ವಾರ್ಷಿಕ ತಪಾಸಣೆ ಹಾಗು ಡಿ.ಪಿ.ಇಡಿ. ಕಾಲೇಜುಗಳ ದಾಖಲಾತಿ ಪರಿಶೀಲನೆ.
2. ವಿಭಾಗೀಯ ಉಪನಿರ್ದೇಶಕರು(ದೈಹಿಕ ಶಿಕ್ಷಣ) ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಬಗ್ಗೆ ತಪಾಸಣೆ ಮಾಡಿ ನೀಡಿದ ವರದಿಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ನಿರ್ದೇಶಕರು (ಪ್ರೌಢ ಶಿಕ್ಷಣ) ಇವರಿಗೆ ಸಲ್ಲಿಸುವುದು.
3. ಪ್ರೌಢ ಶಾಲೆಗಳು/ಸ.ಪ.ಪೂ. ಕಾಲೇಜುಗಳ ತಪಾಸಣೆ ನಡೆಸುವುದು. (ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ)
4. ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ದೈಹಿಕ ಶಿಕ್ಷಣ, ಕ್ರೀಡೆ, ಯೋಗ ಮತ್ತು ಆರೋಗ್ಯ ಶಿಕ್ಷಣದ ಪರಿಷ್ಕರಣೆ ಮತ್ತು ಅಭಿವೃದ್ಧಿ ಬಗ್ಗೆ ಆಯುಕ್ತರಿಗೆ ವರದಿ ಮಾಡುವುದು.
5. ದೈಹಿಕ ಶಿಕ್ಷಣ ಶಿಕ್ಷಕ ಉನ್ನತ ವ್ಯಾಸಂಗಕ್ಕಾಗಿ ನಿಯೋಜನೆ ಮಾಡುವ ಬಗ್ಗೆ ನಿರ್ದೇಶಕರ (ಪ್ರೌಢ ಶಿಕ್ಷಣ) ಇವರಿಗೆ ಪ್ರಸ್ತಾವನೆ ಸಲ್ಲಿಸುವುದು.
6. ಭಾರತ ಸೇವಾದಲ ಮತ್ತು ಭಾರತ ಸೇವಕ ಸಮಾಜ ಈ ಸಂಸ್ಥೆಗಳ ಅನುದಾನ ಬಿಡುಗಡೆಗೆ ನಿರ್ದೇಶಕರ (ಪ್ರೌಢ ಶಿಕ್ಷಣ) ಇವರಿಗೆ ಪ್ರಸ್ತಾವನೆ ಸಲ್ಲಿಸುವುದು.
7. ಶಾಲಾ ಮಟ್ಟದ ರಾಷ್ಟ್ರೀಯ ಕ್ರೀಡಾಕೂಟಗಳ ರಾಜ್ಯ ತಂಡಗಳ ಆಯ್ಕೆ, ತರಬೇತಿ ಆಯೋಜನೆ ಮಾಡುವುದು ಮತ್ತು ಮೇಲುಸ್ತುವಾರಿ ನೋಡಿಕೊಳ್ಳುವುದು.
8. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಾಗಿ ದೈಹಿಕ ಶಿಕ್ಷಣ ಶಿಕ್ಷಕರ ಆಯ್ಕೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಆಯ್ಕೆ ಮಾಡಲು ಸಹಕರಿಸುವುದು.
9. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕ್ರೀಡೆಗಳಲ್ಲಿ ಅತ್ಯುತ್ತಮ ಪ್ರತಿಭೆ ತೋರಿಸುವ ಕ್ರೀಡಾಪಟು ಮತ್ತು ಶಿಕ್ಷಕರಿಗೆ ಸ್ಟೈಫಂಡ್ ನೀಡುವ ಬಗ್ಗೆ ಶಿಫಾರಸ್ಸು ಹಾಗು ಉನ್ನತ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾಗಿ ನೀಡುವ ಬಗ್ಗೆ ಆಯುಕ್ತರಿಗೆ ಶಿಫಾರಸ್ಸು ಮಾಡುವುದು.
10. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕ್ರೀಡಾ ಶುಲ್ಕ, ಸಂಚಿತ ನಿಧಿಯನ್ನು ವೆಚ್ಚ ಮಾಡುವ ಬಗ್ಗೆ ಸಂಪೂರ್ಣ ವಿವರ ಮತ್ತು ಮಾರ್ಗದರ್ಶನ ನೀಡುವುದು.
11. ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಅನುಪಯುಕ್ತ ಕ್ರೀಡಾ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಕ್ರಮ ಜರುಗಿಸುವುದು.
12. ಆಯುಕ್ತರ ಕಛೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೈಹಿಕ ಶಿಕ್ಷಣ, ಕ್ರೀಡೆ, ಯೋಗ ಮತ್ತು ಆರೋಗ್ಯ ಶಿಕ್ಷಣ ವಿಷಯದ ಬಗ್ಗೆ ಕಾರ್ಯನಿರ್ವಹಿಸುವುದು ಮತ್ತು ಆಯುಕ್ತರಿಗೆ ಸಹಕರಿಸುವುದು.
13. ಶಾಲೆಯ ರಜಾ ದಿನಗಳಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳನ್ನು ಅಭಿವೃದ್ಧಿಪಡಿಸುವುದು.
14. ಕ್ರೀಡಾಪಟು ಮತ್ತು ಶಿಕ್ಷಕರಿಗೆ ಕ್ರೀಡಾ ತರಬೇತಿ ಕಾರ್ಯಾಗಾರ ನಡೆಸುವುದು.
15. ವಾರ್ಷಿಕವಾಗಿ ಕನಿಷ್ಟ 100 ದಿನಗಳು ರಾಜ್ಯದ ವಿವಿಧ ಕಛೇರಿ, ಶಾಲೆ ಮತ್ತು ಕಾಲೇಜುಗಳಿಗೆ ತಪಾಸಣೆ ಹಾಗು ಭೇಟಿ ನೀಡುವುದು.
16. ವಿದ್ಯಾರ್ಥಿ ಕ್ರೀಡಾನಿಧಿ ನಿರ್ವಹಣೆ
    - ಅ) ರಾಜ್ಯದ ವಿದ್ಯಾರ್ಥಿ ಕ್ರೀಡಾನಿಧಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು
    - ಆ) ವಿದ್ಯಾರ್ಥಿ ಕ್ರೀಡಾನಿಧಿಯ ಎಲ್ಲಾ ಆರ್ಥಿಕ ಹಣಕಾಸು ನಿರ್ವಹಿಸುವ ಬಗ್ಗೆ ನಿರ್ದೇಶಕರ (ಪ್ರೌಢ ಶಿಕ್ಷಣ) ಇವರಿಗೆ ಹಾಗೂ ಆಯುಕ್ತರಿಗೆ ನೆರವಾಗುವುದು.
    - ಇ) ಎಲ್ಲಾ ಜಿಲ್ಲೆಗಳಲ್ಲಿ ವಿದ್ಯಾರ್ಥಿ ಕ್ರೀಡಾನಿಧಿಯ ಆಟದ ವೆಚ್ಚ ಬಗ್ಗೆ ತಪಾಸಣೆ ನಡೆಸುವುದು.
    - ಈ) ವಿದ್ಯಾರ್ಥಿ ಕ್ರೀಡಾನಿಧಿಯಿಂದ ನಡೆಸುವ ಕ್ರೀಡಾಕೂಟಗಳ ಬಗ್ಗೆ ಮಾರ್ಗದರ್ಶನ ನೀಡುವುದು.
    - ಉ) ವಿದ್ಯಾರ್ಥಿ ಕ್ರೀಡಾನಿಧಿಯ ಮಹಾಮಂಡಳಿ ಸಭೆಯನ್ನು ಆಯೋಜಿಸಿ ಸಭೆಯ ನಡಾವಳಿಯಂತೆ ಆ ಸಭೆಯ ಅಧ್ಯಕ್ಷರ ಅನುಮತಿ ಪಡೆದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು.

Scanned by CamScanner

ಊ) ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿಯಿಂದ ಆದಾಯ ವೆಚ್ಚ ಮಾಡುವ ಬಗ್ಗೆ ನಿರ್ದೇಶಕರು (ಪ್ರೌಢ ಶಿಕ್ಷಣ) ರವರ ಮೂಲಕ ಆಯುಕ್ತರ ಆದೇಶ ಪಡೆದು ಕಾರ್ಯನಿರ್ವಹಿಸುವುದು.

ಋ) ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ವಿದ್ಯಾರ್ಥಿ ಕ್ರೀಡಾನಿಧಿ ವಸೂಲಿ ಹಾಗು ವೆಚ್ಚ ಬಗ್ಗೆ ತಪಾಸಣೆ ನಡೆಸುವುದು.

ಎ) ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿಯ ವೆಚ್ಚಗಳ ಬಗ್ಗೆ ದೇಶಕರು (ಪ್ರೌಢ ಶಿಕ್ಷಣ) ರವರ ಮೂಲಕ ಆಯುಕ್ತರ ಆದೇಶ ಪಡೆದು ಕಾರ್ಯನಿರ್ವಹಿಸುವುದು.

ಏ) ಜಿಲ್ಲೆ, ತಾಲ್ಲೂಕುಗಳಲ್ಲಿ ವಿದ್ಯಾರ್ಥಿ ಕ್ರೀಡಾ ನಿಧಿಯನ್ನು ದುರುಪಯೋಗವಾದಲ್ಲಿ ಶಿಸ್ತು ಕ್ರಮ ಜರುಗಿಸಲು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರಿಗೆ ಶಿಫಾರಸ್ಸು ಮಾಡುವುದು.

17. S.G.F.I. ನೊಂದಿಗೆ ಎಲ್ಲಾ ಆರ್ಥಿಕ ಮತ್ತು ಆಡಳಿತಾತ್ಮಕ ಪತ್ರ ವ್ಯವಹಾರ ನಡೆಸುವುದು.
18. ರಾಜ್ಯದಲ್ಲಿ ಕ್ರೀಡೆ, ಯೋಗ ಮತ್ತು ದೈಹಿಕ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಪಡೆಯಲು ಕಾರ್ಯಕ್ರಮ ಮತ್ತು ಕ್ರಿಯಾ ಯೋಜನೆ ರೂಪಿಸಿ ಆಯುಕ್ತರ ಮುಖಾಂತರ ಸರ್ಕಾರಕ್ಕೆ ಕಳುಹಿಸುವುದು.
19. ಸರ್ಕಾರದಿಂದ ಕ್ರೀಡಾ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನವನ್ನು ಬಳಸುವುದು (ಮಾನ್ಯ ಆಯುಕ್ತರ ಅನುಮೋದನೆ ಪಡೆದು)
20. ಕ್ರೀಡಾ ಸಾಮಗ್ರಿ ಖರೀದಿ ಮತ್ತು ವಿತರಣೆ (ಮಾನ್ಯ ಆಯುಕ್ತರ ಅನುಮೋದನೆ ಪಡೆದು)
21. ಎಲ್ಲಾ ಜಿಲ್ಲೆಗಳಲ್ಲಿ ಏಕರೂಪ ಕ್ರೀಡಾ ನಿಯಮಾವಳಿ ಜಾರಿಗೆ ತರುವುದು.
22. ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳ ಆಯ್ಕೆ ಮತ್ತು ಕ್ರೀಡಾಕೂಟಗಳನ್ನು ಏಕರೂಪದಲ್ಲಿ ಸಂಘಟಿಸುವ ಬಗ್ಗೆ ಮಾರ್ಗದರ್ಶನ ನೀಡುವುದು.
23. ದೈಹಿಕ ಶಿಕ್ಷಣ, ಕ್ರೀಡೆ, ಯೋಗ ಮತ್ತು ಆರೋಗ್ಯ ಶಿಕ್ಷಣ ಬಗ್ಗೆ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರ ಮುಖಾಂತರ ಆಯುಕ್ತರೊಂದಿಗೆ ನಡೆಸುವುದು.
24. ಆಯುಕ್ತರು ಸೂಚಿಸುವ ಇತರೆ ಆಡಳಿತಾತ್ಮಕ ಮತ್ತು ಇತರೆ ಕೆಲಸಗಳನ್ನು ನಿರ್ವಹಿಸುವುದು.
25. ಪ್ರೊಫೆಸರ್ ವೈದ್ಯನಾಥನ್ ಕಮಿಟಿ ಶಿಫಾರಸ್ಸುಗಳನ್ನು ಕಾಲ ಮಿತಿಯೊಳಗೆ ಹಂತ ಹಂತವಾಗಿ ಅನುಷ್ಠಾನ ಗೊಳಿಸಲು ಕ್ರಮ ವಹಿಸುವುದು.
26. ಸಿ.ಪಿ.ಇ.ಡಿ ಕಾಲೇಜುಗಳ ತಪಾಸಣೆ ಹಾಗು ಮಾರ್ಗದರ್ಶನ
27. ಕ್ಲಾಸ್ ಮತ್ತು A.T.I.(Administrative Training Institution)ನಲ್ಲಿ ತರಬೇತಿ ಪಡೆಯಲು ಅಧಿಕಾರಿಗಳನ್ನು ನಿಯೋಜಿಸುವುದು. ಹಾಗು ಇದಕ್ಕಾಗಿ ಪೂರ್ವ ಯೋಜನೆ ರೂಪಿಸುವುದು
28. D.P.Ed. ಕಾಲೇಜುಗಳ ಮಾನ್ಯತೆ ನವೀಕರಿಸಲು ಸಲಹೆಯನ್ನು N.C.E.R.T. ಗೆ ನಿರ್ದೇಶಕರು (ಪ್ರೌಢ ಶಿಕ್ಷಣ) ರವರ ಮೂಲಕ ಸಲ್ಲಿಸುವುದು.

ಸಹ ನಿರ್ದೇಶಕರು(ದೈಹಿಕ ಶಿಕ್ಷಣ) ಇವರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಗಳನ್ನು ನಿರ್ದೇಶಕರು (ಪ್ರೌಢ ಶಿಕ್ಷಣ) ರವರ ಮೂಲಕ ಮಾನ್ಯ ಆಯುಕ್ತರ ಆದೇಶ ಪಡೆದು ಕಾರ್ಯನಿರ್ವಹಿಸುವುದು.

Scanned by CamScanner

## ಹಿರಿಯ ಸಹಾಯಕ ನಿರ್ದೇಶಕರು (ದೈಹಿಕ ಶಿಕ್ಷಣ), ಡಿ.ಎಸ್.ಇ.ಆರ್.ಟಿ. ಕಛೇರಿ ಬೆಂಗಳೂರು :

1. ದೈಹಿಕ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯ ವಸ್ತು ತಯಾರಿಕೆ ಮತ್ತು ರಚನೆ ಬಗ್ಗೆ ಕ್ರಮ ಕೈಗೊಳ್ಳುವುದು.
2. ದೈಹಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಕ್ರೀಡೆ, ಯೋಗ ಮುಂತಾದ ವಿಷಯಗಳ ಬಗ್ಗೆ ಕ್ರಿಯಾ ಯೋಜನೆ ತಯಾರಿಸಿ ಮಾನ್ಯ ನಿರ್ದೇಶಕರ ಮಾರ್ಗದರ್ಶನ ಪಡೆದು ಅನುಷ್ಠಾನಗೊಳಿಸುವುದು.
3. ದೈಹಿಕ ಶಿಕ್ಷಣ ವಿಷಯದ ಬಗ್ಗೆ ತರಬೇತಿ, ತರಬೇತಿಗೆ ಸಂಬಂಧಿಸಿದ ಪೂರಕ ಸಾಹಿತ್ಯಗಳ ರಚನೆ, ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದು.
4. ದೈಹಿಕ ಶಿಕ್ಷಣ ಕ್ಷೇತ್ರದ ವಿಷಯವಾರು ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಅವರುಗಳ ಸೇವೆಯನ್ನು ವಸ್ತು ರಚನೆ, ಪಠ್ಯ ಪುಸ್ತಕ ತಯಾರಿಕೆಗೆ,ತರಬೇತಿ ಸಾಹಿತ್ಯ ರಚನೆಗೆ ಮೇಲಾಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.
5. ಕಾಲಕಾಲಕ್ಕೆ ಬದಲಾಗುವ ಸರ್ಕಾರಿ, ಇಲಾಖಾ ಆದೇಶಗಳನ್ನು ಪಾಲಿಸುವುದು.
6. ದೈಹಿಕ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ನಿರ್ದೇಶಕರಿಗೆ ಶೈಕ್ಷಣಿಕ ಮತ್ತು ಆಡಳಿತಾತ್ಮ ಕಾರ್ಯಗಳಿಗೆ ಸಹಕಾರ ನೀಡುವುದು.

## ಹಿರಿಯ ಸಹಾಯಕ ನಿರ್ದೇಶಕರು (ದೈಹಿಕ ಶಿಕ್ಷಣ), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸುವ ಡಿ.ಪಿ.ಇಡಿ. ಸರ್ಟಿಫಿಕೇಟ್ ಕೋರ್ಸ ಮತ್ತು ಯೋಗ ಕೋರ್ಸ್ ಪರೀಕ್ಷೆಯ ಬಗ್ಗೆ ಪರೀಕ್ಷಾ ಮಂಡಳಿಯ ನಿಯಮಾವಳಿಗಳನ್ನು ಪಾಲಿಸುವುದು.
2. ನಿರ್ದೇಶಕರು(ಇತರೆ ಪರೀಕ್ಷೆಗಳು) ಇವರ ಮಾರ್ಗದರ್ಶನ ಪಡೆದು ಕಾಲ ಕಾಲಕ್ಕೆ ಬದಲಾಗುವ ನಿಯಮಾವಳಿಗಳ ಬಗ್ಗೆ ಸಂಬಂಧಿಸಿದ ದೈಹಿಕ ಶಿಕ್ಷಣ ಕಾಲೇಜು ಗಳಿಗೆ ಮಾರ್ಗದರ್ಶನ ನೀಡುವುದು.
3. ಪರೀಕ್ಷೆಗಳನ್ನು ನಡೆಸುವ ಬಗ್ಗೆ ಗೌಪ್ಯತೆ, ಇತರೆ ವಿಷಯಗಳ ಬಗ್ಗೆ ಹಿರಿಯ ಅಧಿಕಾರಿಗಳಿಂದ ಮಾರ್ಗದರ್ಶನ ಪಡೆದು ಕ್ರಮ ಕೈಗೊಳ್ಳುವುದು.
4. ಮಾನ್ಯ ನಿರ್ದೇಶಕರು ನೀಡುವ ಆದೇಶಗಳನ್ನು ಅನುಷ್ಠಾನಗೊಳಿಸುವುದು.
5. ಮಾನ್ಯ ನಿರ್ದೇಶಕರು ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾಲೇಜುಗಳಿಗೆ ಸಹಕಾರ ನೀಡುವುದು.

## ಹಿರಿಯ ಸಹಾಯಕ ನಿರ್ದೇಶಕರು (ದೈಹಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು

1. ಜಿಲ್ಲೆಗಳಿಂದ ಬಂದ ವಿದ್ಯಾರ್ಥಿ ಕ್ರೀಡಾನಿಧಿ ಸಂಗ್ರಹಣೆ, ವ್ಯವಸ್ಥಿತವಾಗಿ ಜಿಲ್ಲಾವಾರು ಮಾಹಿತಿ ನೀಡುವುದು.
2. ಕ್ರೀಡಾಭಿವೃದ್ಧಿಗಾಗಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವುದು.
3. ಕಾಲಕಾಲಕ್ಕೆ ಬದಲಾಗುವ ಕ್ರೀಡಾ ನಿಯಮಗಳ ಬಗ್ಗೆ ಸಂಬಂಧಿಸಿದ ಕ್ರೀಡಾ ಸಂಸ್ಥೆಗಳಿಂದ ಮಾಹಿತಿ ಪಡೆದು ಇಲಾಖೆಯಲ್ಲಿ ಅನುಷ್ಠನಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.
4. ರಾಷ್ಟ್ರೀಯ ಹಬ್ಬಗಳ ಆಚರಣೆ ಬಗ್ಗೆ ಮಾನ್ಯ ಆಯುಕ್ತರ ಮಾರ್ಗದರ್ಶನ ಪಡೆದು ವ್ಯವಸ್ಥಿತವಾಗಿ ಕಾರ್ಯಕ್ರಮ ರೂಪಿಸುವುದು.
5. ವಿದ್ಯಾರ್ಥಿ ಕ್ರೀಡಾನಿಧಿಯ ಸದ್ಬಳಕೆಯ ಬಗ್ಗೆ ಜಿಲ್ಲೆ, ತಾಲ್ಲೂಕು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
6. ದೈಹಿಕ ಶಿಕ್ಷಣ, ಕ್ರೀಡೆ, ಯೋಗ, ಮುಂತಾದ ವಿಷಯಗಳ ಬಗ್ಗೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಷ್ಠಾನದ ಬಗ್ಗೆ ಮಾರ್ಗದರ್ಶನ ಪಡೆದು ಕ್ರಮಕೈಗೊಳ್ಳುವುದು.
7. ದೈಹಿಕ ಶಿಕ್ಷಣ ಶಿಕ್ಷಕರ ಜೇಷ್ಠತಾ ಪಟ್ಟಿ ತಯಾರಿಕೆ, ಬಡ್ತಿ, ಹುದ್ದೆಗಳ ಸೃಜಿಸುವ ಬಗ್ಗೆ ಮಾಹಿತಿ ಕ್ರೋಢೀಕರಿಸಿ ನಿರ್ದೇಶಕರು ಪ್ರೌಢ ಶಿಕ್ಷಣ ರವರಿಗೆ ಪ್ರಸ್ತಾವನೆ ಸಲ್ಲಿಸುವುದು.
8. ರಾಷ್ಟ್ರೀಯ ಕ್ರೀಡಾಕೂಟಗಳ ಸಂಘಟನೆ ಬಗ್ಗೆ ಪೂರ್ವಭಾವಿ ಸಿದ್ಧತೆ, S.G.F.I. ಕ್ರೀಡಾಕೂಟಗಳಿಗೆ ಕ್ರೀಡಾ ತಂಡ ಕಳುಹಿಸುವ ಬಗ್ಗೆ ವ್ಯವಸ್ಥೆಗೊಳಿಸುವುದು.
9. ಕ್ಲಸ್ಟರ್, ತಾಲ್ಲೂಕು ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳ ಪಟ್ಟಿ ತಯಾರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡುವುದು.
10. ಕ್ರೀಡಾಕೂಟಗಳಿಗೆ ಸಂಬಂಧಿಸಿದ ಕ್ರೀಡಾಪಟುಗಳ ಪ್ರಯಾಣ (ರೈಲ್ವೆ + ಬಸ್ ಪ್ರಯಾಣ) ದ ಬಗ್ಗೆ ಪೂರ್ವಭಾವಿಯಾಗಿ ಕ್ರಮಕೈಗೊಳ್ಳುವುದು.

Scanned by CamScanner